ದಿನಾಂಕಃ 24.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ನಿಯೋಜಿತ ಪ್ರತಿವಾದಿ ನಂಬರ 2(ಎ) ಮತ್ತು 2(ಬಿ) ಪರ ಶ್ರೀ ಎಸ್. ವಿ. ಕೆ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರಕ್ಕೆ ಮಾಹಿತಿಯನ್ನು ನಾನೇ ನೀಡಿದ್ದೇನೆ. ಅದೇ ರೀತಿ ಮುಖ್ಯ ಅರ್ಜಿಯನ್ನು ಸಲ್ಲಿಸಲು ಸಹ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಮಾಹಿತಿ ಮೇರೆಗೆ ಅರ್ಜಿಯನ್ನು ತಯಾರಿಸಿರುತ್ತಾರೋ ಅಥವಾ ಇಲ್ಲವೋ ಎಂಬ ಬಗ್ಗೆ ನಾನು ಪರಿಶೀಲನೆ ಮಾಡಿರುತ್ತೇನೆ. ನನ್ನ ಮುಖ್ಯ ಅರ್ಜಿಯಲ್ಲಿ ಹೇಳಿರುವ ಸಂಗತಿಗಳು ಹಾಗೂ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿರುವ ಸಂಗತಿಗಳು ಒಂದೇ ಇರುತ್ತವೆ. ಮೃತ್ಯುಪತ್ರಗಳನ್ನು ಮಾಡಿರುವ ಸಂಗತಿ ನನಗೆ 2025 ನೇ ಜುಲೈ 2 ನೇ ವಾರದಲ್ಲಿ ಗೊತ್ತಾಗಿರುತ್ತದೆ. ಅದಕ್ಕಿಂತ ಮುಂಚೆ ನನಗೆ ಸದರಿ ಮೃತ್ಯುಪತ್ರಗಳ ಬಗ್ಗೆ ನನಗೆ ಗೊತ್ತಾಗಿರಲಿಲ್ಲ.

ನಾನು ಪೊಲೀಸ್ ಇಲಾಖೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಸನ್ 2017 ರಲ್ಲಿ ಸೇವೆಗೆ ಸೇರಿಕೊಂಡಿರುತ್ತೇನೆ. ನಾನು ಪ್ರಥಮವಾಗಿ ಉಡುಪಿ ಜಿಲ್ಲೆಯಲ್ಲಿ ಸನ್ 2017 ರಿಂದ ಸನ್ 2021 ನೇ ಮೇ ತಿಂಗಳಿನವರೆಗೆ ಸೇವೆ ಸಲ್ಲಿಸಿರುತ್ತೇನೆ. ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿಕೊಂಡು ನ್ಯಾಯಾಲಯದ ಮುಂದೆ ಹಾಜರುಪಡಿಸಿ ಖೊಟ್ಟಿ ಸಾಕ್ಷಿ ನುಡಿದರೆ ಅದು ಕಾನೂನು ರೀತ್ಯ ಅಪರಾಧವಾಗುತ್ತದೆ ಎಂಬುದು ನನಗೆ ಗೊತ್ತಿರುತ್ತದೆ.

ನಾನು ಸಿಂಡಿಕೇಟ್ ಬ್ಯಾಂಕ, ನೇಸರಗಿ ಶಾಖೆಯಲ್ಲಿ ಖಾತೆಯನ್ನು ಹೊಂದಿರುತ್ತೇನೆ. ಈಗ ಸುಮಾರು 5-6 ವರ್ಷಗಳ ಹಿಂದೆ ಸದರಿ ಬ್ಯಾಂಕ ಖಾತೆಯನ್ನು ಹೊಂದಿರುತ್ತೇನೆ. ಖಾತೆ ಸಂಖ್ಯೆ ನನಗೆ ನೆನಪಿಲ್ಲ. ದಿ.06.12.2022 ರಂದು ನಾನು ಸಿಂಡಿಕೇಟ್ ಬ್ಯಾಂಕ , ನೇಸರಗಿ ಶಾಖೆಗೆ ಪಾರ್ವತಿ ಶಿವಪ್ಪ ರಾಚನ್ನವರ ಅಂದರೆ ಮೃತ 2 ನೇ ಪ್ರತಿವಾದಿಯ ಹೆಸರಿನಲ್ಲಿದ್ದ ಬ್ಯಾಂಕ

ಖಾತೆಯಲ್ಲಿರುವ ಹಣವನ್ನು ವಾರಸಾ ನಾತೆಯಿಂದ ನನಗೆ ಕೊಡಬೇಕೆಂದು ಅರ್ಜಿಯನ್ನು ಸಲ್ಲಿಸಿದ್ದೆ. ಯಾವ ವಾರಸಾ ನಾತೆಯಿಂದ ಸದರಿ ಮೃತ 2 ನೇ ಪ್ರತಿವಾದಿಯ ಖಾತೆಯಲ್ಲಿದ್ದ ಹಣವನ್ನು ನನಗೆ ವರ್ಗಾಯಿಸಬೇಕೆಂದು ಅರ್ಜಿಯನ್ನು ಸಲ್ಲಿಸಿದ್ದೀರಿ? ಎಂದರೆ ಸಾಕ್ಷಿಯು ನಾನು ಮೃತ 2ನೇ ಪ್ರತಿವಾದಿಯ ಸೋದರಳಿಯನಿದ್ದು, ಅವಳು ನನ್ನ ಜೊತೆ ವಾಸಿಸುತ್ತಿದ್ದ ಕಾರಣ ನಾನು ಅವಳ ವಾರಸುದಾರ ಇರುತ್ತೇನೆಂದು ಹೇಳಿ ಸದರಿ ಹಣವನ್ನು ನನಗೆ ವರ್ಗಾಯಿಸಬೇಕೆಂದು ಕೇಳಿ ಅರ್ಜಿ ಸಲ್ಲಿಸಿದ್ದೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಸೋದರಳಿಯ ಸೋದರತ್ತೆಗೆ ವಾರಸಾ ಆಗುವುದಿಲ್ಲ ಎಂದರೆ ನಿಜ.

ಮೃತ 2 ನೇ ಪ್ರತಿವಾದಿಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಅವರಿಬ್ಬರು ಬದುಕಿದ್ದಾರೆ. ಅವರಿಬ್ಬರು ಮೃತ 2 ನೇ ಪ್ರತಿವಾದಿಗೆ ಸರಳ ವಾರಸುದಾರರು ಇರುತ್ತಾರೆಂದರೆ ನಿಜ. ನಾನು ಬ್ಯಾಂಕಿಗೆ ಅರ್ಜಿಯನ್ನು ಕೊಡುವ ಪೂರ್ವದಲ್ಲಿ ಸದರಿ ಮೃತ 2 ನೇ ಪ್ರತಿವಾದಿಯ ಮಕ್ಕಳಿಗೆ ನೀವು ಅವಳ ಸರಳ ವಾರಸುದಾರರು ಇದ್ದು, ಸದರಿ ಹಣವನ್ನು ಪಡೆಯಲು ಅರ್ಜಿ ಕೊಡುವಂತೆ ನಾನು ಅವರನ್ನು ಸಂಪರ್ಕಿಸಿರುವುದಿಲ್ಲ. ಅವರನ್ನು ಸಂಪರ್ಕಿಸಲು ಏನು ತೊಂದರೆ ಇತ್ತು ಎನ್ನುವ ಪ್ರಶ್ನೆಗೆ ಸಾಕ್ಷಿಯು ಅವರ ಜೊತೆ ನನ್ನ ಸಂಬಂಧ ಸರಿ ಇರಲಿಲ್ಲ ಎಂದು ನುಡಿಯುತ್ತಾರೆ. ಸದರೀಯವರು ತಮ್ಮ ತಾಯಿಯನ್ನು ಸರಿಯಾಗಿ ನೋಡಿಕೊಳ್ಳದೇ ಇರುವ ಕಾರಣ ನಾನು ಅವರಿಗೆ ಬುದ್ಧಿವಾದ ಹೇಳಿದ್ದರಿಂದ ನನ್ನ ಜೊತೆ ಅವರ ಸಂಬಂಧ ಚೆನ್ನಾಗಿ ಇರಲಿಲ್ಲ ಎಂದು ನುಡಿಯುತ್ತಾರೆ. ಸದರೀಯವರು ಮೃತ 2 ನೇ ಪ್ರತಿವಾದಿಗೆ ಯಾವುದೇ ಹಣಕಾಸಿನ ಸಹಾಯವನ್ನಾಗಲೀ ಅಥವಾ ಅವಳ ಆರೋಗ್ಯದ ಬಗ್ಗೆ ಕಾಳಜಿ ಮಾಡುವುದಾಗಲೀ ಅಥವಾ ಉಟೋಪಚಾರ ಮಾಡುವ ಬಗ್ಗೆಯಾಗಲೀ ಯಾವುದೇ ರೀತಿಯ ಸಹಾಯ ಮಾಡುತ್ತಿರಲಿಲ್ಲ. ಮೃತ 2 ನೇ ಪ್ರತಿವಾದಿಗೆ ಸರಕಾರದಿಂದ ಪಿಂಚಣಿ ಬರುತ್ತಿತ್ತು ಅಲ್ಲದೇ ನಾನು ಸಹ ಸ್ವಲ್ಪ

ಹಣಕಾಸಿನ ಸಹಾಯವನ್ನು ಮಾಡಿದ್ದೇನೆ. ಅವರು ಎಷ್ಟು ಪಿಂಚಣಿ ಪಡೆಯುತ್ತಿದ್ದರು ಎಂದು ನನಗೆ ಗೊತ್ತಿಲ್ಲ ಆದರೆ ಅವರೇ ಬ್ಯಾಂಕಿಗೆ ಹೋಗಿ ಹಣವನ್ನು ತರುತ್ತಿದ್ದರು. ಸಾಕ್ಷಿ ಮುಂದುವರೆದು ಕೊನೆಯ ತಿಂಗಳು 9-10 ಸಾವಿರ ರೂ. ಪಿಂಚಣಿ ಹಣ ಪಡೆದಿರುವ ಬಗ್ಗೆ ನನಗೆ ಗೊತ್ತಿರುತ್ತದೆ. ನಾನು ಸರಕಾರಿ ಸೇವೇಗೆ ಸೇರಿದ ನಂತರ ಅವರಿಗೆ ಅವಶ್ಯಕತೆ ಬಿದ್ದಾಗ ನನ್ನ ಬಳಿ ಕೇಳಿದರೆ ಹಣ ಕೊಡುತ್ತಿದ್ದೆ ಆದರೆ ಯಾವಾಗ, ಎಷ್ಟು ಹಣವನ್ನು ಕೊಟ್ಟಿರುತ್ತೇನೆಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಸದರೀ ಹಣವನ್ನು ನಾನು ಅವರಿಗೆ ನಗದು ರೂಪದಲ್ಲಿಯೇ ಕೊಡುತ್ತಿದ್ದೆ. ಸದರಿ ಹಣವನ್ನು ನಾನು ನನ್ನ ಖಾತೆಯಿಂದ ಅವರಿಗೆ ತೆಗೆದುಕೊಡುತ್ತಿದ್ದೆ. ನಾನು ಯಾವಾಗ ನನ್ನ ಖಾತೆಯಿಂದ ಹಣವನ್ನು ತೆಗೆದು ಅವರಿಗೆ ಕೊಟ್ಟಿರುತ್ತೇನೆ ಎನ್ನುವ ಬಗ್ಗೆ ದಾಖಲೆ ಸಿಗುತ್ತದೆ.

ಮೃತ 2 ನೇ ಪ್ರತಿವಾದಿ ಹಾಗೂ ಅವಳ ಎರಡು ಜನ ಮಕ್ಕಳ ಮದ್ಯೆ ತಂಟೆ ತಕರಾರು, ಹೊಡೆದಾಟ ಆಗಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲೆಯಾಗಿರುವ ಬಗ್ಗೆಯಾಗಲೀ ಅಥವಾ ಬೇರೆ ಪ್ರಕರಣಗಳು ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಮೃತ 2 ನೇ ಪ್ರತಿವಾದಿಯ 2 ನೇ ಮಗ ಶಂಕರ ಸಿದ್ಧೇಶ್ವರ ಪ್ರೌಢಶಾಲೆ, ಖನಗಾಂವ ಗ್ರಾಮದಲ್ಲಿ ಅಟೆಂಡರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾನೆ. ಸದರಿ ಶಂಕರ ದೇವನಗೌಡನಹಟ್ಟಿ ಗ್ರಾಮದಲ್ಲಿ ವಾಸವಾಗಿದ್ದ ಎಂದರೆ ಸಾಕ್ಷಿಯು ಮುಂಚೆ ವಾಸವಾಗಿದ್ದ ಆದರೆ ಸನ್ 2021 ರಿಂದ ಪಂಥಬಾಳೇಕುಂದ್ರಿ ಗ್ರಾಮದಲ್ಲಿ ತನ್ನ ಹೆಂಡತಿ ಮಕ್ಕಳೊಂದಿಗೆ ಬೇರೆ ಮನೆ ಮಾಡಿಕೊಂಡು ವಾಸವಾಗಿದ್ದಾನೆ. ಸಾಕ್ಷಿ ಮುಂದುವರೆದು ಮುಂಚೆಯೂ ಸಹ ಖನಗಾಂವ ಗ್ರಾಮದಲ್ಲಿ ತನ್ನ ಹೆಂಡತಿ ಮಕ್ಕಳೊಂದಿಗೆ ಬೇರೆ ವಾಸವಾಗಿದ್ದ ಎಂದು ನುಡಿಯುತ್ತಾರೆ.ಆತ ಖನಗಾಂವ ಗ್ರಾಮದಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸವಾಗಿದ್ದ. ಸದರಿ ಬಾಡಿಗೆ ಮನೆ ನಂಬರ ನನಗೆ ಹೇಳಲು ಆಗುವುದಿಲ್ಲ. ಆತ ಬೇರೆ ಬೇರೆ ಬಾಡಿಗೆ ಮನೆಗಳಲ್ಲಿ

ವಾಸವಾಗಿದ್ದರಿಂದ ಮಾಲೀಕರ ಹೆಸರುಗಳನ್ನು ಸಹ ಹೇಳಲು ಆಗುವುದಿಲ್ಲ. ಆತ ವಾಸವಾಗಿದ್ದ ಬಾಡಿಗೆ ಮನೆಗಳನ್ನು ನಾನು ನೋಡಿರುತ್ತೇನೆ. ಯಾವ ಓಣಿಗಳಲ್ಲಿ ಆತ ಬಾಡಿಗೆ ಮನೆ ಮಾಡಿಕೊಂಡು ವಾಸವಾಗಿದ್ದ ಎಂದರೆ ಸಾಕ್ಷಿಯ ಗ್ರಂಥಾಲಯದ ಬಳಿ ಇರುವ ಮನೆಯಲ್ಲಿ ಹಾಗೂ ಕುರುಬರ ಓಣಿಯಲ್ಲಿರುವ ಮನೆಯಲ್ಲಿ ವಾಸವಾಗಿದ್ದ ಎಂದು ನುಡಿಯುತ್ತಾರೆ. ಸದರೀ ಮನೆಗಳ ಮಾಲೀಕರನ್ನು ಕರೆಸಿ ಸಾಕ್ಷಿ ಮಾಡಿಸುತ್ತೀರಾ? ಎಂದರೆ ಸಾಕ್ಷಿಯು ಅವರನ್ನು ಕೇಳಿ ನೋಡಬೇಕೆಂದು ನುಡಿಯುತ್ತಾರೆ.

ನಾನು ಮೃತ 2 ನೇ ಪ್ರತಿವಾದಿಗೆ ಹಣಕಾಸಿನ ಸಹಾಯ ಮಾಡುತ್ತಾ ಬಂದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಮೃತ 2 ನೇ ಪ್ರತಿವಾದಿಗೆ 500/- ರೂ. 1000/- ರೂ. ಹಾಗೂ 2000/- ಗಳನ್ನು ಅವಶ್ಯಕತೆ ಬಿದ್ದಾಗ ಕೊಟ್ಟಿದ್ದು ಆದರೆ ಆ ಬಗ್ಗೆ ಲೆಕ್ಕ ಇಟ್ಟಿರುವುದಿಲ್ಲ. ಅಲ್ಲದೇ ಯಾವಾಗ ಎಷ್ಟು ಹಣವನ್ನು ಕೊಟ್ಟಿರುತ್ತೇನೆಂದು ಹೇಳಲು ಆಗುವುದಿಲ್ಲ. ನಾನು ಸರಕಾರಿ ಸೇವೆಗೆ ಸೇರಿದ ನಂತರದಲ್ಲಿ ಸದರಿ ಹಣವನ್ನು ಕೊಟ್ಟಿರುತ್ತೇನೆ. ಮೃತ 2 ನೇ ಪ್ರತಿವಾದಿ ಮಗ ಶಂಕರ ಬೇರೆ ಮನೆ ಮಾಡಿಕೊಂಡು ವಾಸವಾಗಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮೃತ 2 ನೇ ಪ್ರತಿವಾದಿ ದೇವಗೌಡನಹಟ್ಟಿ ಗ್ರಾಮದ ಮನೆ ನಂಬರ 254 ರಲ್ಲಿ ವಾಸವಾಗಿದ್ದಳು. ನಾನು ಅವಳ ಆಧಾರ ಕಾರ್ಡನ್ನು ನೋಡಿದ್ದೇನೆ. ಈಗ ನೋಡುತ್ತಿರುವ ಆಧಾರ ಕಾರ್ಡ ಮೃತ 2 ನೇ ಪ್ರತಿವಾದಿಯದ್ದು ಇರುತ್ತದೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಒಪ್ಪಿ ಕೊಂಡಿದ್ದರಿಂದ ಅದನ್ನು ಮುಖಾಭಿಲೇಯಾಗಿ ನಿ.ಆರ್.1 ಎಂದು ಗುರುತಿಸಲಾಯಿತು. ನನ್ನ ಆಧಾರ ಕಾರ್ಡನಲ್ಲಿ ನಾನು ವಾಸವಾಗಿರುವ ಮನೆ ನಂಬರನ್ನು ನಮೂದಿಸಲಾಗಿರುತ್ತದೆ ಎಂದರೆ ನಿಜ. ನನ್ನ ಆಧಾರ ಕಾರ್ಡನಲ್ಲಿ ಬರೆದಿರುವ ಮನೆ ನಂಬರ ನನಗೆ ಹೇಳಲು ಆಗುವುದಿಲ್ಲ. ಸಾಕ್ಷಿ

ಮುಂದುವರೆದು ಮನೆ ನಂಬರನ್ನು ತಪ್ಪಾಗಿ ನಮೂದಿಸಿರುತ್ತಾರೆಂದು ನುಡಿಯುತ್ತಾರೆ. ಸಾಮಾನ್ಯವಾಗಿ ಸಂಬಂಧಪಟ್ಟ ವ್ಯಕ್ತಿ ಕೊಟ್ಟ ಮಾಹಿತಿ ಮೇರೆಗೆ ಆಧಾರ ಕಾರ್ಡನಲ್ಲಿ ವಿವರಗಳನ್ನು ನಮೂದಿಸುತ್ತಾರೆಂದರೆ ನಿಜ. ಸಾಕ್ಷಿ ಮುಂದುವರೆದು ಪ್ರಾರಂಭದಲ್ಲಿ ಸರಿಯಾಗಿ ವಿವರಗಳನ್ನು ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಆಧಾರ ಕಾರ್ಡನ್ನು ನವೀಕರಣ ಮಾಡಿಕೊಂಡಿರುತ್ತೇನೆ. ನನ್ನ ಭಾವಚಿತ್ರ ಹಾಗೂ ಮೊಬೈಲ್ ನಂಬರನ್ನು ಸೇರಿಸಿಕೊಂಡಿರುತ್ತೇನೆ. ಸದರಿ ನನ್ನ ಆಧಾರ ಕಾರ್ಡನ್ನು ನವೀಕರಣ ಮಾಡಿಸಿಕೊಳ್ಳುವ ಸಮಯದಲ್ಲಿ ಮನೆ ನಂಬರ ತಪ್ಪಾಗಿರುವುದನ್ನು ತಿದ್ದುಪಡಿ ಮಾಡಿಕೊಂಡಿರುವುದಿಲ್ಲ. ಮನೆ ನಂಬರ ತಪ್ಪಾಗಿರುವುದನ್ನು ತಿದ್ದುಪಡಿ ಮಾಡಿಕೊಳ್ಳಲು ಏನಾದರೂ ತೊಂದರೆ ಇತ್ತಾ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಊರು, ತಾಲ್ಲೂಕು ಹಾಗೂ ಜಿಲ್ಲೆ ಸರಿಯಾಗಿ ನಮೂದಿಸಿದ್ದರಿಂದ ಮನೆ ನಂಬರ ತಿದ್ದುಪಡಿ ಮಾಡಿಸಿಕೊಳ್ಳುವ ಅವಶ್ಯಕತೆ ಇರಲಿಲ್ಲ ಎಂದು ನಾನು ತಿದ್ದುಪಡಿ ಮಾಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಈಗ ನೋಡುತ್ತಿರುವ ಆಧಾರ ಕಾರ್ಡನ ಜರಾಕ್ಸ ಪ್ರತಿ ನನಗೆ ಸಂಬಂಧಿಸಿದ್ದು, ಅದರಲ್ಲಿರುವ ಸಹಿ ನನ್ನದು ಇದ್ದು, ನಾನೇ ಅದನ್ನು ದೃಡಿಕರಿಸಿರುತ್ತೇನೆ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು ನಿ. ಆರ್. 2 ಎಂದು ಗುರುತಿಸಲಾಯಿತು. ನಿ. ಆರ್ 2 ರಲ್ಲಿ ಮನೆ ನಂಬರ 222, ಬಸವನಗರ, ಖನಗಾಂವ ಎಂದು ನನ್ನ ವಿಳಾಸವನ್ನು ನಮೂದಿಸಿರುತ್ತಾರೆಂದರೆ ನಿಜ. ಸಾಕ್ಷಿ ಮುಂದುವರೆದು ಮನೆ ನಂಬರ ತಪ್ಪಾಗಿ ನಮೂದು ಆಗಿರುತ್ತದೆ ಎಂದು ನುಡಿಯುತ್ತಾರೆ. ದಿನಾಂಕ 27.06.2013 ರಲ್ಲಿ ನಾನು ನನ್ನ ಆಧಾರ ಕಾರ್ಡನ್ನು ನವೀಕರಣ ಮಾಡಿ ಕೊಂಡ ಪ್ರಕಾರ ನನ್ನ ವಿಳಾಸವನ್ನು ತೋರಿಸಿರುತ್ತಾರೆಂದರೆ ಸಾಕ್ಷಿಯು ದಿನಾಂಕ 27.06.2013

ನೇದ್ದರಂದು ನನಗೆ ಪ್ರಥಮಬಾರಿಗೆ ಆಧಾರ ಕಾರ್ಡನ್ನು ಕೊಟ್ಟಿದ್ದು, ನವೀಕರಣ ಮಾಡಿಕೊಂಡ ದಿನಾಂಕ ಆಧಾರ ಕಾರ್ಡನಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು, ನನ್ನ ಹೆಂಡತಿ, ತಂದೆ ತಾಯಿ, ಸಹೋದರಿಯರು ಎಲ್ಲರೂ ಸದರಿ ಮನೆಯಲ್ಲಿ ಒಟ್ಟಿಗೆ ವಾಸವಾಗಿದ್ದೇವು ಎಂದರೆ ಸಾಕ್ಷಿಯು ಮುಂಚೆ ನಾನು, ನನ್ನ ತಂದೆ ತಾಯಿ, ಸಹೋದರಿಯರು , ಅಜ್ಜ- ಅಜ್ಜಿ ಹಾಗೂ ಸೋದರತ್ತೆ ಮನೆ ನಂಬರ 254 ದೇವಗೌಡನಹಟ್ಟಿ ಖನಗಾಂವದಲ್ಲಿ ವಾಸವಾಗಿದ್ದೇವು ಎಂದು ನುಡಿಯುತ್ತಾರೆ. ಸದರಿ ಮನೆಯಲ್ಲಿ ಎಲ್ಲರೂ ಒಟ್ಟಿಗೆ ವಾಸವಾಗಿದ್ದ ಬಗ್ಗೆ ದಾಖಲೆ ಇರುತ್ತದೆಯಾ? ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

Sd/-
(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ